1-30 P.M.

Business of the House

ANNOUNCEMENT

MADAM SPEAKER.—The Business Advisory Committee which met on Thursday the 18th March, 1976 decided that :

The House after adjourning on 27th March, 1976 as scheduled, will sit from 7th April to 15th April, 1976 and again from 10th May to 27th May, 1976.

During the April sittings, taxation Bills will be taken up.

In the May sittings, the Government Bills will be taken up.

PAPERS LAID ON THE TABLE

SECRETARY.—Madam Speaker, I beg to lay on the Table the first list of Un-starred Questions and Answers of Seventh Session.

MADAM SPEAKER.—The list is laid.

BUDGET ESTIMATES FOR 1976-77—DEMANDS FOR GRANTS

Demand Nos. 2, 11, 12, 14, 15, 20, 21, 43, 52 and 53.

(Debate continued)

† ಶ್ರೀ ಆಂದಾನಯ್ಯ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸದನದ ಮುಂದೆ ಮಂಡಿಸಿದ ಎಲ್ಲ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಒಂದೆರಡು ಸೂಚನೆಗಳನ್ನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಆದಮೇಲೆ ಸಾಮಾನ್ಯ ಆಡಳಿತದಲ್ಲಿ ಒಳ್ಳೆಯಚ್ಚಿನ ಬದಲಾವಣೆಗಳು ಕಂಡುಬರುತ್ತಿವೆ. ಈ ತುರ್ತುಪರಿಸ್ಥಿತಿ ಘೋಷಣೆ ಆಗುವುದಕ್ಕಿಂತ ಮೊದಲು ನಾವು ಯಾವುದೇ ಆಫೀಸ್‌ಗಳಿಗೆ ಹೋದರೂ ಅಲ್ಲಿ ಬರೀ ಖಾಲಿ ಟೇಬಲ್ ಮತ್ತು ಖಾಲಿ ಕುರ್ಚಿಗಳು ಇರುತ್ತಿದ್ದುವು. ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿದಮೇಲೆ ಎಲ್ಲ ಅಧಿಕಾರಿಗಳೂ, ಗುಮಾಸ್ತರುಗಳೂ ಅವರವರ ಕಾರ್ಯದಲ್ಲಿ ನಿರತರಾಗಿರುವುದನ್ನು ನೋಡುತ್ತಿದ್ದೇವೆ. ಆಡಳಿತದಲ್ಲಿ ಹೆಚ್ಚಿನ ಬದಲಾವಣೆಗಳು ಕಂಡುಬರುತ್ತಿವೆ. ಮಾನ್ಯ ಅಧ್ಯಕ್ಷರೆ, ಖಾಲಿ ಜಾಗಗಳನ್ನು ಭರ್ತಿ ಮಾಡುವಾಗ ಸರ್ಕಾರದಲ್ಲಿ ವಿಳಂಬವಾಗುತ್ತಿದೆ. ಉದಾಹರಣೆಗೆ ಹೇಳುವುದಾದರೆ ಪೊನ್ನೆ ಶಾಲಾ ಉಪಾಧ್ಯಾಯರುಗಳನ್ನು ೫೫ ವರ್ಷಗಳಿಗೆ ರಿಟೈರ್ ಮಾಡಿದಾಗ ಅವರ ಜಾಗಗಳಿಗೆ ಬೇರೆ ಯವರನ್ನು ಭರ್ತಿಮಾಡುವಾಗ ತಿಂಗಳುಗಟ್ಟಲೇ ವಿಳಂಬವಾಗಿ ಸ್ಕೂಲುಗಳಲ್ಲಿ ಪಾಠಪ್ರವಚನಗಳು ಸರಿಯಾಗಿ ನಡೆದಿಲ್ಲ. ಅನೇಕ ಜೂನಿಯರ್ ಕಾಲೇಜುಗಳಲ್ಲಿ ಇದರಿಂದಾಗಿ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಈರೀತಿ ವಿಳಂಬವಾಗುತ್ತಿರುವುದರಿಂದ ಇದರ ಬಗ್ಗೆ ಮುಂಜ್ಞೆಚ್ಚರಿಕೆಯನ್ನು ತೆಗೆದು ಕೊಂಡು ಖಾಲಿ ಬಿದ್ದ ಸ್ಥಳಗಳನ್ನು ಭರ್ತಿ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಎಲ್ಲ ಆಫೀಸ್‌ಗಳಲ್ಲಿಯೂ ಕೂಡ ಐ. ಎಸ್. ಅಧಿಕಾರಿಗಳನ್ನು ನೇಮಕ ಮಾಡುವ ವ್ಯವಸ್ಥೆಯನ್ನು ಮಾಡಬೇಕು. ಕೇಂದ್ರ ಸರ್ಕಾರದಲ್ಲಿ ಕೂಡ ಈ ರೀತಿ ಬದಲಾವಣೆಯಾಗುತ್ತಿದೆ. ಮುಂಬೈನಲ್ಲಿ ವಿದ್ಯಾ ಇಲಾಖೆ, ಇಂಜಿನಿಯರಿಂಗ್ ಇಲಾಖೆ, ಮತ್ತು ವೈದ್ಯಕೀಯ ಇಲಾಖೆಗಳಿಗೆ ಹೆಚ್ಚಿನ ಪರಿಣತರಾದ ಅಧಿಕಾರಿಗಳನ್ನು ಇಲಾಖೆಯ ಮುಂಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಹೆಚಿ ನ ಪರಿಜ್ಞಾನವುಳ್ಳ ವ್ಯಕ್ತಿಗಳಾದರೆ ಆಯಾ ಇಲಾಖೆ